ಶ್ರೀ ಎಂ ಬಿ. ರಾಮಸ್ವಾಮಿ.—ಟ್ರಾಕ್ಟರ್‌ಗಳಿಗೆ ನರ್‌ಚಾರ್ಜ್ ಮನ್ನಾ ಮಾಡಿದ್ದೀರಿ, ಡೀಸೆಲ್ ಪಂಪಿಗೆ ಮಾಡಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ನರ್‌ಚಾರ್ಜ್‌ಲ್ಲ, ಪೀನರ್ ಇಂಟರೆಸ್ಟ್. ಇದೇ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಭರವಸೆ ಕೊಟ್ಟಿರುವ ಪ್ರಕಾರ ಡೀಸೆಲ್ ಮತ್ತು ಎಲೆಕ್ಟ್ರಿಕ್ ಪಂಪ್ ಸೆಟ್ಟುಗಳನ್ನು ಇಲಾಖೆಗಳ ಮುಖಾಂತರ ಕೊಟ್ಟಿರುವುದರಿಂದ 6 ತಿಂಗಳಲ್ಲಿ ಕಂತು ಪೂರ್ತಿ ಕಟ್ಟಿದ್ದರೆ, ಆಗ ನುಸ್ಸಿ ಬಡ್ಡಿ ಕಟ್ಟಿದ್ದರೆ ಅದನ್ನು ಸಾಮಾನ್ಯ ಬಡ್ಡಿ ಮತ್ತು ಅನಲಗೆ ವಜಾ ಹಾಕಿ ಕೊಂಡು ನುಸ್ಸಿ ಬಡ್ಡಿ ಮನ್ನಾ ಮಾಡಿದ್ದೇವೆ. 6 ತಿಂಗಳೊಳಗೆ ಕಟ್ಟಬೇಕು ಎಂದು ಸರ್ಕಾರದ ಕುಕುಂ ಹೊರಡಿಸಿದ್ದೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಮಾನ್ಯ ಮಂತ್ರಿಗಳು ಟ್ರಾಕ್ಟರ್ ಮೇಲೆ ಹಾಕಿರತಕ್ಕ ಕುಸ್ಸಿ ಬಡ್ಡಿಯನ್ನು ತೆಗೆದಿದ್ದೇವೆ ಎಂದು ಉತ್ತರ ಹೇಳಿದರು. ಆದರೆ ಅನೇಕ ಕಡೆಗಳಲ್ಲಿ ದೂರುಗಳು ಬರುತ್ತಿವೆ. ಪಂಪ್‌ಸೆಟ್ ಸಾಲ ತೀರಿಸುವುದಕ್ಕೆ ತೊಂದರೆಯಾಗಿವೆ. ಅದನ್ನು ಒಟ್ಟಿಗೆ ಒಂದೇ ಕಂತಿನಲ್ಲಿ ಕಟ್ಟಿದರೆ ರಿಯಾಯಿತಿ ಕೊಡುತ್ತೀರಾ ?

ಅಧ್ಯಕ್ಷರು.—ಕೊಡುತ್ತೇವೆ ಎಂದು ಈಗಾಗಲೇ ಉತ್ತರ ಹೇಳಿದ್ದಾರೆ

ಕ್ಯಾಸಂಬಳ್ಳಿ ಗ್ರಾಮದಲ್ಲಿ ಆರೋಗ್ಯ ಘಟಕದ ಕಟ್ಟಡವನ್ನು ನಿರ್ಮಿಸುವುದು

502. ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು (ಬೇತಮಂಗಲ).—ಆರೋಗ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಬಂಗಾರುಪೇಟೆ ತಾಲ್ಲೂಕಿನ ಕ್ಯಾಸಂಬಳ್ಳಿ ಗ್ರಾಮದಲ್ಲಿ ಹೆಲ್ತ್‌ಯೂನಿಟ್ ಬಿಲ್ಡಿಂಗ್ ಮತ್ತು ಕಟ್ಟಡಗಳನ್ನು ಕಟ್ಟಲು ಕಂಟ್ರಾಕ್ಟ್ ಕೊಟ್ಟು ಎಷ್ಟು ವರ್ಷಗಳಾದುವು ;

(ಆ) ಇವುಗಳನ್ನು ಕಟ್ಟುವ ಕೆಲಸ ಇದುವರೆಗೂ ಪೂರ್ತಿಯಾಗದೆ ಇರುವುದಕ್ಕೆ ಕಾರಣವೇನು;

(ಇ) ಈಗ ಅಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿವರ್ಗದವರು ಅಲ್ಲಿಯೆ ಉಳಿದುಕೊಂಡು ಕೆಲಸ ಮಾಡಲು ಕ್ವಾರ್ಟರ್ಸ್ ಇಲ್ಲದಿದ್ದಕ್ಕೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ;

(ಈ) ಈಗ ಸಿಬ್ಬಂದಿ ವರ್ಗದವರು ಸ್ಥಳದಲ್ಲಿಯೇ ಇಲ್ಲದ ಕಾರಣ ಸುತ್ತಮುತ್ತ ಇರುವ ಗ್ರಾಮಗಳ ಜನರಿಗೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಉ) ಈ ಕೆಲಸ ಪೂರೈಸಲು ಎಷ್ಟು ದಿನಗಳಾಗಬಹುದು ;

(ಊ) ಈ ಕೆಲಸವನ್ನು ಜಾಗ್ರತೆ ಮುಗಿಸಲು ಸರಕಾರದವರು ಏನು ಕ್ರಮ ಕೈಕೊಂಡಿದ್ದಾರೆ?

ಶ್ರೀ ಸುಭಾಷ್ ಆಸೂರೆ(ದೊಡ್ಡ ಮತ್ತು ಮಧ್ಯಮ ನೀರಾವರಿ ಶಾಖೆಗಳ ರಾಜ್ಯ ಮಂತ್ರಿಗಳು)

[ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಮಂತ್ರಿಗಳು) ಪರವಾಗಿ]

(ಅ) 4 ವರ್ಷಗಳು

(ಆ) ಮೊದಲು ಕೊಟ್ಟ ಕಂಟ್ರಾಕ್ಟರು ಕೆಲಸ ಮುಗಿಸದ ಕಾರಣ

(ಇ) ಬಂದಿದೆ.

(ಈ) ಬಂದಿದೆ.

(ಉ) ಮಾರ್ಚ್ ತಿಂಗಳ ಕೊನೆಗೆ ಮುಗಿಯುವ ನಿರೀಕ್ಷೆ ಇದೆ.

(ಊ) ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್, ಕೋಲಾರ ಇವರಿಗೆ ಸೂಚನೆ ನೀಡಿದೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ಸ್ವಾಮಿ, ಕಾಂಟ್ರಾಕ್ಟ್ ಕೊಟ್ಟು ನಾಲ್ಕು ವರ್ಷ ವಾದರೂ ಕೆಲಸ ಮುಗಿಸಿಲ್ಲ. ಆದರೆ ಇನ್ನು 15 ದಿವಸದಲ್ಲಿ ಕಟ್ಟಡದ ಕೆಲಸ ಪೂರೈಸಬಹುದು ಎಂದು ಹೇಳುತ್ತೀರಲ್ಲಾ ಹೇಗೆ ?

†ಶ್ರೀ ಸುಧಾಷ್ ಅನ್ಸೂರೆ.—ಈ ಕೆಲಸ ಮೊದಲು ಕಂಟ್ರಾಕ್ಟರ್‌ಗೆ ಕೊಟ್ಟಿದ್ದೆವು. ಅವರು ಕೆಲಸ ಸರಿಯಾಗಿ ಮಾಡಲಿಲ್ಲ ಎಂದು ಬೇರೆ ಏಜೆನ್ಸಿಗೆ ಈಗ ಕೊಟ್ಟಿದ್ದೇವೆ. ಈಗ ಅನೇಕ ಹಂತದಲ್ಲಿ ಕಟ್ಟಿಡದ ಕೆಲಸ ಪೂರ್ತಿಯಾಗುತ್ತಿದೆ. ಇನ್ನು ಎರಡು ತಿಂಗಳಲ್ಲಿ ಅಸ್ಪತ್ರೆ ಕಟ್ಟಡ ಪೂರ್ತಿಯಾಗು ತ್ತದೆ ಎಂದು ಹೇಳುತ್ತೇನೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ನನಗೆ ತಿಳಿದಮಟ್ಟಿಗೆ ಕೆಲವು ಕಟ್ಟಡಗಳಿಗೆ ಬಾಗಿಲು ಕಿಟಕಿ ಸರಿಯಾಗಿ ಇಟ್ಟಿಲ್ಲ. ದೀಪ ಇಲ್ಲ, ನೀರಿನ ವ್ಯವಸ್ಥೆ ಇಲ್ಲ. ಮಾರ್ಚ್ ಅಖ್ಖೆರೊಳಗೆ ಕಟ್ಟಡ ಮುಗಿಯುವ ನಿರೀಕ್ಷೆ ಇದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಈಗ ಮತ್ತೆ ಇನ್ನೂ ಎರಡು ತಿಂಗ ಳಾಗುತ್ತದೆ ಎಂದು ಹೇಳುತ್ತೀರಿ. ಇಷ್ಟು ವರ್ಷವಾದರೂ ಕಟ್ಟಡದ ಕೆಲಸ ಪೂರ್ತಿಯಾಗದಿದ್ದರೆ ಜನರ ಗತಿ ಏನು ?

ಶ್ರೀ ಸುಧಾಷ್ ಅನ್ಸೂರೆ.—ಮಾರ್ಚ್ ಒಳಗೆ ಬಿಲ್ಡಿಂಗ್ ಕಂಪ್ಲೀಟ್ ಆದರೆ ಪಾಟರ್‌ಫಿಟ್ಟಿಂಗ್ಸ್, ಎಲೆಕ್ಟ್ರಿಸಿಟಿ ಎಲ್ಲಾ ಮಾಡುವುದಕ್ಕೆ ಇನ್ನೂ ಎರಡು ತಿಂಗಳು ಬೇಕಾಗುತ್ತದೆ. ಎರಡು ತಿಂಗಳಲ್ಲಿ ಎಲ್ಲಾ ಕಂಪ್ಲೀಟ್ ಮಾಡಿ ಆಸ್ಪತ್ರೆ ಪಾವತಿಸಿಕೊಡುತ್ತೇವೆ. ಮಾರ್ಚಿಯೊಳಗೆ ಬಿಲ್ಡಿಂಗ್ ಕಂಪ್ಲೀಟ್ ಆಗುತ್ತದೆ. ಅದರಲ್ಲಿ ಅನುಮಾನ ಇಲ್ಲ. ಪಿ.ಎಚ್.ಸಿ. ಬಿಲ್ಡಿಂಗ್ ಕಂಪ್ಲೀಟ್ ಆಗಿದೆ. ಮೆಡಿಕಲ್ ಆಫೀಸರ್ ಕ್ವಾರ್ಟರ್ಸ್ ಕಂಪ್ಲೀಟಾಗಿದೆ. ಬೇರೆ ಬಿಲ್ಡಿಂಗ್‌ನಲ್ಲಿ ಸಣ್ಣಪುಟ್ಟ ಕೆಲಸಗಳು ನಡೆಯುತ್ತಿವೆ ಅವನ್ನೂ ಕೂಡ ಮುಗಿಸಿದ ನಂತರ ಸ್ಯಾನಿಟರಿ, ಪಾಟರ್‌ಫಿಟ್ಟಿಂಗ್ ಎಲ್ಲಾ ಮಾಡಿಸಿ ಇನ್ನು 2 ತಿಂಗಳಲ್ಲಿ ಆಸ್ಪತ್ರೆ ಮಾಡಬೇಕು ಎಂದು ಮಾಡಿದ್ದೇವೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ಖುದ್ದಾಗಿ ನಿನ್ನೆ ದಿವಸ ನಾನು ಹೋಗಿ ನೋಡಿ ಕೊಂಡು ಬಂದಿದ್ದೇನೆ. ತಾವು ಹೇಳಿದ ಪ್ರಕಾರ ಅರ್ಧ ಕೆಲಸವೂ ಆಗಿಲ್ಲ. ಆದಷ್ಟು ಬೇಗ್ಗೆ ಮುಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ಸ್ವಾಮಿ ?

ಶ್ರೀ ಸುಧಾಸ್ ಅನ್ಸೂರೆ.—ಮಾಡುತ್ತೇವೆ.

Drainage Scheme at Chittapur Town

521. SMT. VIJAYA DESAI (Chittapur).—Will the Minister for Law and Municipal Administration be pleased to state :—

(*a*) whether Government intend to take up drainage schsme in Chittapur Town ;

(*b*) if so, when ?

SRI D. K. NAIKAR (Minister for Law and Municipal Administration).—

(*a*) No.

(*b*) Does not arise.

SMT. VIJAYA DESAI.—Since how many years, the Government has been receiving representations in this ragard, Sir ?

†SRI D.K. NAIKAR.—A representation was received by the Govern ment and in that connection, even an esti nate was also prepared and the same was turned down on a defferent aspect.